# ಕರ್ನಾಟಕ ಸರ್ಕಾರ

ವಿಷಯ: ಶ್ರೀ ಕೆ.ಬಿ. ನಿಂಗರಾಜಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ ಪಂಚಾಯತ್, ಚನ್ನರಾಯಪಟ್ಟಣ ಇವರ ವಿರುದ್ಧದ ಶಿಸ್ತು ಕ್ರಮ ಅಂತಿಮ ಆದೇಶ.

ಓದಲಾಗಿದೆ: 1. ಕಾರಣ ಕೇಳುವ ನೋಟೀಸು ಸಂಖ್ಯೆ: ಗ್ರಾಅಪ/05/ವಿಸೇಬಿ/2014 ದಿನಾಂಕ:22-01-2014.
2. ಶ್ರೀ ಕೆ.ಬಿ. ನಿಂಗರಾಜಪ್ಪ, ಇವರ ಲಿಖಿತ ಹೇಳಿಕೆ ದಿ:26-02-2014.

-----

ಪ್ರಸ್ತಾವನೆ:

ಶ್ರೀ ಕೆ.ಬಿ. ನಿಂಗರಾಜಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಚನ್ನರಾಯಪಟ್ಟಣ, ಇವರು ಸದರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿದರೆನ್ನಲಾದ ಈ ಕೆಳಕಂಡ ಕರ್ತವ್ಯಲೋಪದ ಆಪಾದನೆಗಳಿಗೆ ಸಂಬಂಧಿಸಿದಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 12(1) (ಎ) ರಡಿಯಲ್ಲಿ ಕಾರಣ ಕೇಳುವ ನೋಟೀಸನ್ನು ಅವರ ಮೇಲೆ ಜಾರಿ ಮಾಡಲಾಗಿತ್ತು :-

1) ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪ್ರತಿ ಮಾಹೆ ಗ್ರಾಮ ಪಂಚಾಯತಿಗಳಲ್ಲಿ 2 ಸಭೆಗಳನ್ನು ನಡೆಸಿ, ಸಭಾ ನಡವಳಿ ಮತ್ತು ಪ್ರತಿ ಮಾಹೆ 10 ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ, ಭೇಟಿಯ ಪರಿಶೀಲನಾ ವರದಿಯನ್ನು ಸಲ್ಲಿಸಿರುತ್ತಾರೆ. ಆದರೆ ಶ್ರೀ ಕೆ. ಬಿ. ನಿಂಗರಾಜಪ್ಪ ರವರು ಆಗಸ್ಟ್-2013ರ ಮಾಹೆಯ ಸಭಾ ನಡಾವಳಿ ಮತ್ತು ಭೇಟಿಯ ವರದಿಯನ್ನು ಸಲ್ಲಿಸದೆ ಕರ್ತವ್ಯಲೋಪ ಎಸಗಿರುತ್ತಾರೆ.

2) ಚನ್ನರಾಯಪಟ್ಟಣ ತಾಲ್ಲೂಕಿನ 29 ಗ್ರಾಮ ಪಂಚಾಯತಿಗಳಲ್ಲಿ ದಿನಾಂಕ: 18-08-2013ರ ಎಂ.ಐ.ಎಸ್. ವರದಿಯಂತೆ ಈ ದಿನದವರೆಗೂ ಯಾವುದೇ ಮಾನವ ದಿನಗಳನ್ನು ಉತ್ಪತ್ತಿಮಾಡಿರುವುದಿಲ್ಲ. ದಿನಾಂಕ: 30-08-2013ರ ಎಂ.ಐ.ಎಸ್. ವರದಿಯಂತೆ 39 ಗ್ರಾಮಪಂಚಾಯತಿಗಳಲ್ಲಿ ಮಾನವ ದಿನ ಉತ್ಪತ್ತಿ ಮಾಡಿದ್ದು ಒಂದು ಗ್ರಾಮ ಪಂಚಾಯತಿಯಲ್ಲಿ ಮಾನವ ದಿನ ಉತ್ಪತಿಯಾಗದೆ ಇರುವುದಕ್ಕೆ ಕಾರಣರಾಗಿರುತ್ತಾರೆ.

3) ಚನ್ನರಾಯಪಟ್ಟಣ ತಾಲ್ಲೂಕು ಸುಂಡಹಳ್ಳಿ ಗ್ರಾಮ ಪಂಚಾಯತಿಗೆ ಸಂಬಂಧಿಸಿದಂತೆ, ಹೊಸಹಳ್ಳಿ ಗ್ರಾಮಸ್ಥರು ನೀಡಿರುವ ದೂರಿನ ಬಗ್ಗೆ ದಿನಾಂಕ: 30-06-2012 ರಲ್ಲಿ ನೀಡಿರುವ ವರದಿಯು ಅಸಮರ್ಪಕವಾಗಿದ್ದು, ಮತ್ತೊಮ್ಮೆ ಪರಿಶೀಲಿಸಿ ವರದಿ ನೀಡಲು ತಿಳಿಸಿದ್ದರೂ ವರದಿ ನೀಡದೆ ಕರ್ತವ್ಯಲೋಪ ಎಸಗಿರುತ್ತಾರೆ.

4)ಚನ್ನರಾಯಪಟ್ಟಣ ತಾಲ್ಲೂಕು ಜುಟ್ಟನಹಳ್ಳಿ ಗ್ರಾಮ ಪಂಚಾಯತಿಗೆ ಸಂಬಂಧಿಸಿದಂತೆ, ಶ್ರೀ ಪಿ.ಎ.ನಾಗರಾಜು ರವರು ನೀಡಿರುವ ದೂರಿನ ಬಗ್ಗೆ ಅಸಮರ್ಪಕ ವರದಿ ನೀಡಿರುತ್ತಾರೆ. ಪುನ: ಪರಿಶೀಲಿಸಿ ವರದಿ ನೀಡಲು ತಿಳಿಸಿದ್ದರೂ ವರದಿ ನೀಡದೆ ಕರ್ತವ್ಯಲೋಪ ಎಸಗಿರುತ್ತಾರೆ.

5)ಚನ್ನರಾಯಪಟ್ಟಣ ತಾಲ್ಲೂಕು ಬ್ಯಾಡರಹಳ್ಳಿ ಗ್ರಾಮ ಪಂಚಾಯತಿಗೆ ಸಂಬಂದಿಸಿದಂತೆ, ಶ್ರೀ ಶಿವಯ್ಯ ಬಿನ್ ರಂಗಯ್ಯ ರವರು ನೀಡಿರುವ ದೂರಿನ ಬಗ್ಗೆ ದಿನಾಂಕ: 05-11-2012ರಲ್ಲಿ ನೀಡಿರುವ ವರದಿಯು ಅಸಮರ್ಪಕವಾಗಿದ್ದು, ಮತ್ತೊಮ್ಮೆ ಪರಿಶಿಲಿಸಿ ವರದಿ ನೀಡಲು ತಿಳಿಸಿದ್ದರೂ ವರದಿ ನೀಡದೆ ಕರ್ತವ್ಯಲೋಪ ಎಸಗಿರುತ್ತಾರೆ.

6)ಚನ್ನರಾಯಪಟ್ಟಣ ತಾಲ್ಲೂಕು ಮಟ್ಟನವಿಲೆ ಗ್ರಾಮ ಪಂಚಾಯತಿಗೆ ಸಂಬಂಧಿಸಿದಂತೆ, ಮಟ್ಟನವಿಲೆ ಗ್ರಾಮಸ್ಥರು ನೀಡಿರುವ ದೂರಿನ ಬಗ್ಗೆ ನೀಡಿರುವ ವರದಿಯು ಅಸಮರ್ಪಕವಾಗಿದ್ದು, ಮತ್ತೊಮ್ಮೆ ಪರಿಶಿಲಿಸಿ ವರದಿ ನೀಡಲು ತಿಳಿಸಿದ್ದರೂ ವರದಿ ನೀಡದೆ ಕರ್ತವ್ಯಲೋಪ ಎಸಗಿರುತ್ತಾರೆ.

7)ಚನ್ನರಾಯಪಟ್ಟಣ ತಾಲ್ಲೂಕು ತಗಡೂರು ಗ್ರಾಮ ಪಂಚಾಯತಿಗೆ ಸಂಬಂದಿಸಿದಂತೆ, ಶ್ರೀ ಎಲ್.ಡಿ.ರಂಗಸ್ವಾಮಿ ಬಿನ್ ರಂಗಸ್ವಾಮಿ ಇವರು ನೀಡಿರುವ ದೂರಿನ ಬಗ್ಗೆ ನೀಡಿರುವ ವರದಿಯು ಅಸಮರ್ಪಕವಾಗಿದ್ದು, ಮತ್ತೊಮ್ಮೆ ಪರಿಶೀಲಿಸಿ ವರದಿ ನೀಡಲು ತಿಳಿಸಿದ್ದರೂ ವರದಿ ನೀಡದೆ ಕರ್ತವ್ಯಲೋಪ ಎಸಗಿರುತ್ತಾರೆ.

8) ಚನ್ನರಾಯಪಟ್ಟಣ ತಾಲ್ಲೂಕು ಶ್ರವಣಬೆಳಗೊಳ ಗ್ರಾಮ ಪಂಚಾಯತಿಗೆ ಸಂಬಂದಿಸಿದಂತೆ, ಶ್ರೀ ಬೋರೇಗೌಡ ಬಿನ್ ಲೇಟ್ ಲಿಂಗೇಗೌಡರವರು ನೀಡಿರುವ ದೂರಿನ ಬಗ್ಗೆ ನೀಡಿರುವ ಪರಿಶೀಲಿಸಿ ವರದಿ ನೀಡಲು ತಿಳಿಸಿದರೂ ವರದಿ ನೀಡದೆ ಕರ್ತವ್ಯಲೋಪ ಎಸಗಿರುತ್ತಾರೆ.

ಶ್ರೀ ಕೆ.ಬಿ. ನಿಂಗರಾಜಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಚನ್ನರಾಯಪಟ್ಟಣ, ಇವರು ಸದರಿ ನೋಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ವರದಿ ಹಾಗೂ ಸಭಾ ನಡವಳಿಯನ್ನು ಸಲ್ಲಿಸಿರುವುದಾಗಿಯೂ, ಬಾಗೂರು ಗ್ರಾಮ ಪಂಚಾಯತಿಯ ಕಂಪ್ಯೂಟರ್ ಆಪರೇಟರ್ ಹೆರಿಗೆ ರಜೆಯ ಮೇಲೆ ಹೋಗಿದ್ದರಿಂದ ಪ್ರಗತಿ ಸಾಧಿಸಲಾಗಲಿಲ್ಲವೆಂದು ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬಾಗೂರು ಗ್ರಾಮ ಪಂಚಾಯತಿ ಇವರು ದಿ:29-08-2013 ರಲ್ಲಿ ವರದಿ ಮಾಡಿದ್ದು, ಈ ಬಗ್ಗೆ ತಾಲ್ಲೂಕು ಪಂಚಾಯತಿ ಕಛೇರಿಯಿಂದ ಕುಮಾರಿ ರಮ್ಯ ರವರನ್ನು ಕಳುಹಿಸಿ ಕೆಲಸ ಮಾಡಿಸಲು ಸೂಚಿಸಲಾಗಿದ್ದು ಆದರೆ ಅವರು ರಾಜೀನಾಮೆ ನೀಡಿದ ಕಾರಣದಿಂದ ಪ್ರಗತಿ ಸಾಧಿಸಲಾಗಲಿಲ್ಲ. ಈ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಹಾಸನ ರವರಿಗೆ ದಿ:3-9-2013 ರಲ್ಲಿ ಪತ್ರ ಬರೆದಿರುವುದಾಗಿಯೂ, ಸುಂಡಹಳ್ಳಿ ಗ್ರಾಮ ಪಂಚಾಯತಿಗೆ ಸಂಬಂಧಿಸಿದಂತೆ, ಹೊಸಹಳ್ಳಿ ಗ್ರಾಮಸ್ಥರು ನೀಡಿರುವ ದೂರಿನ ಬಗ್ಗೆ ಸ್ಥಳ ಪರಿಶೀಲಿಸಿ ದಿ:2-8-2012 ರಂದು ಮತ್ತೊಮ್ಮೆ ವರದಿ ನೀಡಿರುವುದಾಗಿ, ಶ್ರೀ ಪಿ.ಎ.ನಾಗರಾಜು ರವರು ನೀಡಿರುವ ದೂರಿನ ಬಗ್ಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ರವರೊಂದಿಗೆ ಸ್ಥಳ ಪರಿಶೀಲಿಸಿ ದಿ:16-8-2013 ರಂದು ವರದಿ ನೀಡಿರುವುದಾಗಿ, ಶ್ರೀ ಶಿವಯ್ಯ ಬಿನ್ ರಂಗಯ್ಯ ರವರು ನೀಡಿರುವ ದೂರಿನ ಬಗ್ಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ರವರೊಂದಿಗೆ ಸ್ಥಳ ಪರಿಶೀಲಿಸಿ ದಿ:14-12-2013 ರಂದು ಮತ್ತೊಮ್ಮೆ ವರದಿ ನೀಡಿರುವುದಾಗಿಯೂ, ದಿ:10-06-2013 ರಲ್ಲಿ ಮಟ್ಟನವಿಲೆ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ವಿಚಾರಿಸಿ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ರವರು ನಮೂನೆ-6 ರ ಪ್ರಕಾರ ಕೂಲಿ ಹಣವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಿರುವುದು ತನಿಖೆಯಿಂದ ಕಂಡು ಬಂದಿದ್ದು, ಈ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾಸನ ರವರಿಗೆ ಪತ್ರ ಬರೆದಿರುವುದಾಗಿ, ದಿ: 7-9-2013 ರಲ್ಲಿ ತಗಡೂರು ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಪರಿಶೀಲಿಸಿ ದೂರುದಾರರ ಸಮಕ್ಷಮದಲ್ಲಿ ವಿಚಾರಣೆ ನಡೆಸಿ ವರದಿಯನ್ನು ದಿ:10-9-2013 ರಲ್ಲಿ ಸಲ್ಲಿಸಿರುವುದಾಗಿ, ಚನ್ನರಾಯಪಟ್ಟಣ ತಾಲ್ಲೂಕು ಶ್ರವಣಬೆಳಗೊಳ ಗ್ರಾಮ ಪಂಚಾಯತಿಗೆ ಸಂಬಂಧಿಸಿದ ಪ್ರಕರಣವು ತಾಲ್ಲೂಕು ಪಂಚಾಯತಿ,ಕಾರ್ಯನಿರ್ವಾಹಕ ಅಧಿಕಾರಿ, ನ್ಯಾಯಾಲಯದಲ್ಲಿದ್ದು, ಕಾನೂನು ರೀತ್ಯ ವಿಚಾರಣೆ ನಡೆಸಿ, ಆದೇಶ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲು ಗ್ರಾಮ ಪಂಚಾಯತಿಗೆ ಪ್ರತಿ ನೀಡಲಾಗಿರುತ್ತದೆ ಎಂಬ ವರದಿಯನ್ನು ದಿ:16-8-2013 ರಲ್ಲಿ ನೀಡಿರುವುದಾಗಿ ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿ ಆರೋಪಗಳಿಂದ ದೋಷ ಮುಕ್ತಗೊಳಿಸಲು ಕೋರಿರುತ್ತಾರೆ.

ಆಪಾದಿತ ಅಧಿಕಾರಿ ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದೆ. ಚನ್ನರಾಯಪಟ್ಟಣ ತಾಲ್ಲೂಕಿನ 29 ಗ್ರಾಮ ಪಂಚಾಯತಿಗಳಲ್ಲಿ ಆಗಸ್ಟ್ 18, 2013 ರ ತನಕ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಯಾವುದೇ ಮಾನವ ದಿನಗಳನ್ನು ಉತ್ಪತ್ತಿ ಮಾಡದಿರುವುದು ತದನಂತರ ದಿನಾಂಕ: 30-08-2013 ರಂತೆ ಇದ್ದಂತೆ 39 ಗ್ರಾಮ ಪಂಚಾಯತಿಗಳಲ್ಲಿ ಮಾನವ ದಿನಗಳನ್ನು ಉತ್ಪತ್ತಿ ಮಾಡಿದ್ದು, ಒಂದು ಗ್ರಾಮದಲ್ಲಿ ಯಾವುದೇ ಮಾನವ ದಿನ ಉತ್ಪತ್ತಿಯಾಗಿಲ್ಲ ಎಂಬ ಆರೋಪ ಕುರಿತು ತಮ್ಮ ಅಧೀನ ಸಿಬ್ಬಂದಿ ರಜೆ /ರಾಜೀನಾಮೆ ನೀಡಿದ ಪ್ರಯುಕ್ತ ಪ್ರಗತಿ ಸಾದಿಸಲಾಗಲಿಲ್ಲವೆಂದು ತಮ್ಮ ಹೇಳಿಕೆಯಲ್ಲಿ ಒಪ್ಪಿಕೊಂಡಿದ್ದಾರೆ. ಇನ್ನುಳಿದ

ಅಪಾದನೆಗಳು ಪ್ರಮುಖವಾಗಿ ಕೆಲವು ಗ್ರಾಮ ಪಂಚಾಯತಿಗಳ ಮೇಲೆ ಸ್ವೀಕರಿಸಿದ್ದ ದೂರುಗಳ ವಿಚಾರಣೆ ನಡೆಸಿ ವರದಿ ನೀಡಿದ್ದು, ಅವು ಅಸಮರ್ಪಕವಾಗಿದ್ದವು ಎಂಬುದರ ಬಗ್ಗೆ ಆಪಾದಿತ ಅಧಿಕಾರಿಯು ಮುಂದುವರೆದ ವರದಿಗಳನ್ನು ಸಲ್ಲಿಸಿರುವುದಾಗಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಅಂದರೆ, ಈ ಬಗ್ಗೆ ಹಿಂದೆ ಅಸಮರ್ಪಕ ವರದಿಗಳನ್ನು ಸಲ್ಲಿಸಿದ್ದರು ಎಂದು ಆಪಾದಿತ ಅಧಿಕಾರಿಯು ಪರೋಕ್ಷವಾಗಿ ಒಪ್ಪಿಕೊಂಡಂತಾಗಿದ್ದು, ಇದರಿಂದ ಸದರಿ ಅಧಿಕಾರಿಯು ಕರ್ತವ್ಯಲೋಪ ಎಸಗಿದ್ದಾರೆನ್ನುವುದು ಸಾಬೀತಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಶ್ರೀ ಕೆ. ಬಿ. ನಿಂಗರಾಜಪ್ಪ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(ii) ರಲ್ಲಿ ನಿರ್ದಿಷ್ಟ ಪಡಿಸಿರುವ "ವಾಗ್ದಂಡನೆ" ದಂಡನೆ ವಿಧಿಸಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 05 ವಿಸೇಬಿ 2014ಬೆಂಗಳೂರು, ದಿನಾಂಕ:07-06-2014.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಶ್ರೀ ಕೆ.ಬಿ. ನಿಂಗರಾಜಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಚನ್ನರಾಯಪಟ್ಟಣ, ಪ್ರಸ್ತುತ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಂಡ್ಯ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(ii) ರನ್ವಯ, "ವಾಗ್ದಂಡನೆ" ದಂಡನೆ ವಿಧಿಸಿ ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಚಂದ್ರಶೇಖರ್),
ಸರ್ಕಾರದ ಅಧೀನ ಕಾರ್ಯದರ್ಶಿ,(ಸೇ. ಬಿ &ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.
4. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾಸನ
6. ಶ್ರೀ ಕೆ.ಬಿ. ನಿಂಗರಾಜಪ್ಪ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಚನ್ನರಾಯಪಟ್ಟಣ, ಪ್ರಸ್ತುತ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಂಡ್ಯ.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಸರ್ಕಾರದ ಕಾರ್ಯದರ್ಶಿ (ಪಂ.ರಾಜ್) /ಅಪರ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
8. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
9. ಮಾಹಿತಿ ಕೇಂದ್ರ / ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿ.